**O. S. No:118/2020**
**DW:1**

(ಇಂದು ದಿನಾಂಕಃ **25-09-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಸಿ ಬಿ ಕೆ ವಕೀಲರಿಂದಃ**

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ಆದರೆ ಆಂಗ್ಲ ಭಾಷೆ ಬರುವುದಿಲ್ಲ. ನನ್ನ ಗಂಡ 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದು, ಸಹಿ ಮಾತ್ರ ಮಾಡಲು ಬರುತ್ತಿತ್ತು. ನನ್ನ ಮದುವೆ ದಿನಾಂಕಃ 18-05-2008 ರಂದು ಆಗಿರುತ್ತದೆ. ನನ್ನ ತವರು ಮನೆ ಶಿಶುವಿನಹಳ್ಳಿ. ನಮ್ಮ ತಂದೆಗೆ ನಾವು ಇಬ್ಬರು ಗಂಡು ಮಕ್ಕಳು ಹಾಗೂ 3 ಜನ ಹೆಣ್ಣುಮಕ್ಕಳು ಇರುತ್ತವೆ. ನಾನು ಈಗ ಬಸಾಪೂರ ಗ್ರಾಮದ ನನ್ನ ಗಂಡನ ಮನೆಯಲ್ಲಿ ವಾಸವಿದ್ದೇನೆ. ನನ್ನ ಗಂಡನ ಮನೆಯಲ್ಲಿ ವಾದಿ ಮಾತ್ರ ವಾಸವಿದ್ದಾರೆ ಎಂದರೆ ಸರಿಯಲ್ಲ. ವಾದಿ ಹಾಜರು ಪಡಿಸಿರುವ ದಾಖಲೆಗಳನ್ನು ನಾನು ಪರಿಶೀಲಿಸಿರುವುದಿಲ್ಲ.

2. ಚೆನ್ನಬಸಪ್ಪ ರವರಿಗೆ ನಿಂಗಪ್ಪ, 5 ನೇ ಪ್ರತಿವಾದಿ ಹಾಗೂ ಗಂಗವ್ವ ಎನ್ನುವ 3 ಜನ ಮಕ್ಕಳು. ಚೆನ್ನಬಸಪ್ಪನವರು ಒಕ್ಕಲುತನ ಮಾಡುತ್ತಿದ್ದು, ಅವರಿಗೆ ಇದ್ದ ಆದಾಯದ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿಯವರು ಜೀವಂತವಿದ್ದಾಗ ಸದರಿಯವರ 3 ಮಕ್ಕಳ ಮದುವೆಯಾಗಿರುತ್ತದೆ. ನಾನು ಮದುವೆಯಾದ ಕೆಲ ವರ್ಷಗಳ ಕಾಲ ಮಾತ್ರ ನನ್ನ ಗಂಡನೊಂದಿಗೆ ಚೆನ್ನಾಗಿದ್ದು, ನಂತರ ಅವರೊಂದಿಗೆ ಜಗಳ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಗಂಡ ಬೇರೆ ಬೇರೆ ಯಾಗುವ ಹಂತದವರೆಗೆ ಜಗಳವಾಗಿತ್ತು ಎಂದರೆ ಸರಿಯಲ್ಲ. ನಾನು ನನ್ನ ಗಂಡನಿಗೆ ಸರಿಯಾಗಿ ಊಟ ನೀಡುತ್ತೀರಲಿಲ್ಲ ಹಾಗೂ ಹಣ ತರುವಂತೆ ಕಿರುಕುಳ ನೀಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ವಿನಾಃ ಕಾರಣ ತವರು ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಅತ್ತೆಯೊಂದಿಗೆ ಉತ್ತಮ ಬಾಂಧವ್ಯ ಹೊಂದಿರದೇ ನನ್ನ ಗಂಡನೊಂದಿಗೆ ಪ್ರತ್ಯೇಕ ಮನೆ ಮಾಡಿಕೊಂಡು ವಾಸವಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸಂಬಂಧಿಸಿ ಬ್ಯಾಂಕ್ ಖಾತೆಗಳಿವೆ ಎಂದರೆ ಸರಿ. ನಾನು ಸಹ ಸದರಿ ಖಾತೆಯನ್ನು ಬಳಸುತ್ತಿದ್ದೆ ಎಂದರೆ ಸರಿಯಲ್ಲ. ಮನೆಯ ಯಜಮಾನಿಕೆಯನ್ನು ನನ್ನ ಗಂಡ ನಿರ್ವಹಿಸುತ್ತಿದ್ದನು. ನನ್ನ ಗಂಡ ಬ್ಯಾಂಕಿನಲ್ಲಿ ಸಾಲ ಮಾಡಿದ್ದರು ಎಂದರೆ ಸರಿ. ನನ್ನ ಗಂಡ ನನ್ನ ಸಲುವಾಗಿ ಸಾಲ ಮಾಡಿದ್ದರು ಎಂದರೆ ಸರಿಯಲ್ಲ.

3. ಚೆನ್ನಬಸಪ್ಪ ರವರ ಸಹೋದರ ಹನಮಂತಪ್ಪರವರ ಹೆಂಡತಿ ರೇಣವ್ವ ರವರು ಈಗ ಬಸಾಪೂರ ಗ್ರಾಮದಲ್ಲಿ ವಾಸವಿರುತ್ತಾರೆ. ಸದರಿಯವಳ ತವರು ಮನೆ ನಲವಡಿ ಗ್ರಾಮ ಎಂದರೆ ಸರಿ. ಸದರಿ ರೇಣವ್ವ ನನ್ನ ದೂರ ಸಂಬಂಧಿಕರು ಎಂದರೆ ಸರಿ. ಸದರಿ ಹನಮಂತಪ್ಪ ನನ್ನ ತಂದೆಗೆ

ಮುಂಚೆಯಿಂದ ಪರಿಚಯವಿದ್ದರು ಎಂದರೆ ಸರಿ. ನನ್ನ ತಂದೆ, ಚೆನ್ನಬಸಪ್ಪ ಹಾಗೂ ಹನಮಂತಪ್ಪ ಸೇರಿ ಜಮೀನು ಸರ್ವೆ ನಂಃ 318 ಕ್ಷೇತ್ರ 7 ಎಕರೆ 32 ಗುಂಟೆಗೆ ಸಂಬಂಧಿಸಿ ನನ್ನ ಗಂಡನ ಹೆಸರಿನಲ್ಲಿ ದಾಖಲೆಯನ್ನು ಮಾಡಿದ್ದರು ಎಂದರೆ ನನ್ನ ಮದುವೆಗೂ ಮುಂಚೆ ಮಾಡಿರಬಹುದು ಎಂದು ನುಡಿದಿರುತ್ತಾರೆ. ನಿಂಗಪ್ಪ ರವರಿಗೆ ನನ್ನನ್ನು ವಿವಾಹ ಮಾಡಿಕೊಡುವ ಕಾರಣದಿಂದ ಸದರಿ ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಮೂಲತಃ ವಾದಿಯ ತಾಯಿಯ ಆಸ್ತಿ ಎಂದರೆ ಸರಿಯಲ್ಲ. ಸದರಿಯವರಿಗೆ ಸದರಿ ಆಸ್ತಿ ದಿನಾಂಕಃ 19-07-1965 ರಂದು ದಾನ ಪತ್ರದ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಂಶವನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ. ವಾದಿಯ ತಾಯಿಗೆ ವಾದಿ ಒಬ್ಬರೇ ಮಗಳಿದ್ದಳು ಎಂದರೆ ಸರಿ. ವಾದಿಯ ತಾಯಿ ನನ್ನ ಗಂಡನ ಹೆಸರಿನಲ್ಲಿ ಯಾವುದೇ ಕಾಗದ ಪತ್ರಗಳನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ಗಂಡನ ಹೆಸರಿನಲ್ಲಿ ಯಾವ ದಾಖಲೆಯ ಮುಖಾಂತರ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿ ಖೊಟ್ಟಿ ದಾಖಲೆಗಳ ಮುಖಾಂತರ ಬಂದಿರುತ್ತದೆ ಎಂದರೆ ಸರಿಯಲ್ಲ. ಕಾರಣ ಸದರಿ ಆಸ್ತಿಗೆ ವಾದಿ ಮಾತ್ರ ಹಕ್ಕುದಾರರು ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನಗಾಗಲೀ ಅಥವಾ ನನ್ನ ಮಕ್ಕಳಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿಗಳ ಸರ್ವೆ ನಂಬರ, ಕ್ಷೇತ್ರ ಹಾಗೂ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಬಸಾಪೂರದಲ್ಲಿ ನಾನು ವಾಸವಿರುವ ಮನೆಯ ಸಂಖ್ಯೆ ನನಗೆ ಗೊತ್ತಿಲ್ಲ. ಜಮೀನು ಸರ್ವೆ ನಂಃ898/4 ಇದು ವಾದಿಯ ಗಂಡ ವಾದಿಗೆ ದಾನ ಪತ್ರದ ಮುಖಾಂತರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರ ದಿನಾಂಕಃ 14-01-2019 ರಂದು ನೋಂದಣಿಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ವೇಳೆಗೆ ಚೆನ್ನಬಸಪ್ಪನವರಿಗೆ ಕಣ್ಣು ಕಾಣುತ್ತಿರಲಿಲ್ಲ ಹಾಗೂ ಕ್ಯಾನ್ಸರ್ ಆಗಿತ್ತು ಎಂದು ನುಡಿದಿರುತ್ತಾರೆ. ಸದರಿ ಕಾಯಿಲೆಗೆ ಸಂಬಂಧಿಸಿ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಪಾಲು ವಿಭಾಗದ ಪ್ರಕಾರ ಚೆನ್ನಬಸಪ್ಪ ರವರಿಗೆ ಬಂದಿದ್ದು, ಅದು ಅವರ ಸ್ವಂತ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಕಾರಣ ಸದರಿ ಆಸ್ತಿ ವಾದಿಯ ಕಬ್ಜಾ ವಹಿವಾಟಿನಲ್ಲಿದ್ದು ಅದರಲ್ಲಿ ನನಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯ ಕಬ್ಜಾದಲ್ಲಿದ್ದು, ನಮ್ಮ ಕಬ್ಜಾದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತವರು ಮನೆಯಲ್ಲಿದ್ದು ದಾವಾ ಆಸ್ತಿಗೆ ಬರುವುದಿಲ್ಲ ಹಾಗೂ ಕಬ್ಜಾದಲ್ಲಿವುರುವುದಿಲ್ಲ ಎಂದರೆ ಸರಿಯಲ್ಲ.

5. ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿಯವರು ನನ್ನ ಕಿರುಕುಳದಿಂದ ಹಾಗೂ ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದರೆ

ಸರಿಯಲ್ಲ. ಸದರಿಯವರು ಆತ್ಮಹತ್ಯೆ ಮಾಡಿಕೊಳ್ಳುವ 1 ತಿಂಗಳ ಮುಂಚೆ ನಾನು ತವರು ಮನೆಗೆ ಹೋಗಿದ್ದು, ಕಾರಣ ಸದರಿಯವರು ಮಾನಸಿಕ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತಪಟ್ಟಿದ್ದರಿಂದ ನನಗೆ ರೂ. 5,00,000/- ಪರಿಹಾರದ ಹಣ ಬಂದಿರುತ್ತದೆ ಎಂದರೆ ಸರಿ. ಸದರಿ ಹಣ ಬಂದಾಗಿನಿಂದ ನಾನು ಮನೆಬಿಟ್ಟು ಹೋದವಳು ಇಲ್ಲಿಯವರೆಗೆ ಊರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹಣದಲ್ಲಿ ವಾದಿಗೂ ಸಹ ಹಕ್ಕು ಇದೆ ಎಂದರೆ ಸರಿ.

6. ಚೆನ್ನಬಸಪ್ಪನವರಿಗೆ ಕ್ಯಾನ್ಸರ್ ಕಾಯಿಲೆ ನನ್ನ ಗಂಡ ಮೃತಪಟ್ಟ 1 ವರ್ಷದ ನಂತರ ಬಂದಿರುತ್ತದೆ. ಸದರಿಯವರಿಗೆ ಯಾವ ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಮೊದಲಿಗೆ ನವಲಗುಂದದಲ್ಲಿ ಚಿಕಿತ್ಸೆ ಕೊಡಿಸಿದ್ದು, ನಂತರ ಅವರನ್ನು ಹುಬ್ಬಳ್ಳಿಯ ನವನಗರದ ಕಾನ್ಸರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿಯವರ ಆರೈಕೆಗಾಗಿ ವಾದಿ ಹಾಗೂ 6 ನೇ ಪ್ರತಿವಾದಿಯ ಗಂಡ ಅವರ ಜೊತೆ ಇರುತ್ತಿದ್ದರು ಎಂದರೆ ಸರಿ. ಸದರಿಯವರ ಚಿಕಿತ್ಸೆಯ ಕುರಿತು ನನ್ನ ಬಳಿ ದಾಖಲೆ ಇರುವುದಿಲ್ಲ. ನಾನು ವಾದಿಗೆ ಹಣ ನೀಡಿದ್ದರ ಕುರಿತು ದಾಖಲೆಗಳು ಇರುವುದಿಲ್ಲ. ನಾನು ವಾದಿಗೆ ಯಾವುದೇ ರೀತಿ ಹಣ ನೀಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ಮತ್ತು 6 ನೇ ಪ್ರತಿವಾದಿ ಪರ ಶ್ರೀ ಎಸ್ ಐ ಎ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಶಿಶುವಿನಹಳ್ಳಿಯಲ್ಲಿ ವಾಸವಿದ್ದೇನೆಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿ ವಾದಿ ಹಾಗೂ ನಮ್ಮ ನಡುವೆ ಪಾಲು ವಿಭಾಗವಾಗಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ನನ್ನ, ವಾದಿ ಹಾಗೂ ಉಳಿದ ಪ್ರತಿವಾದಿಯರ ಸಾಮೂಹಿಕ ಕಬ್ಜಾದಲ್ಲಿವೆ ಎಂದರೆ ಸರಿಯಲ್ಲ. ನನ್ನ ಗಂಡ ಮೃತಪಟ್ಟ ನಂತರ ದಾವಾ ಆಸ್ತಿಗಳು ನನ್ನ ಹೆಸರಿನಲ್ಲಿ ಆಗಿರುತ್ತವೆ. ನನ್ನ ಗಂಡನಿಗೆ ದಾವಾ ಆಸ್ತಿ ಸರ್ವೇ ನಂಃ 318 ಯಾವ ರೀತಿ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಮದುವೆಗೂ ಮುಂಚೆ ಆತನ ಹೆಸರಿಗೆ ಆಗಿದ್ದು, ಆದರೆ ಯಾವ ರೀತಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನನ್ನ ಗಂಡನಿಗೆ ಸದರಿ ಆಸ್ತಿ ವಾದಿಯ ತಾಯಿ ಯಲ್ಲವ್ವನಿಂದ ಬಂದಿರುತ್ತದೆ ಎಂದರೆ ಇರಬಹುದು. ಸದರಿ ಯಲ್ಲವ್ವ ರವರಿಗೆ ಸದರಿ ಆಸ್ತಿ ಆಕೆಯ ಮಗಳು ವಾದಿ ಹಾಗೂ ಮೊಮ್ಮಕ್ಕಳಿಗೆ ಹೋಗಬೇಕು ಎನ್ನುವ ಇಚ್ಛೆ ಇತ್ತು ಎಂದರೆ ಸರಿಯಲ್ಲ. ಯಲ್ಲವ್ವಳಿಗೆ ಗೊತ್ತಿಲ್ಲದ ಹಾಗೆ ಸದರಿ ಆಸ್ತಿ ನನ್ನ ಗಂಡನ ಹೆಸರಿನಲ್ಲಿ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ.

2. 5 ಮತ್ತು 6 ನೇ ಪ್ರತಿವಾದಿಯ ಮದುವೆಯನ್ನು ನನ್ನ ಅತ್ತೆ ಹಾಗೂ ಮಾವ ನೇರವೇರಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಗಂಡ ಹಾಗೂ ಆತನ ಸಹೋದರ ಸಹ ನೇರವೇರಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿಯವರ ಮದುವೆಯನ್ನು ನನ್ನ ಗಂಡ ನೇರವೇರಿಸಿ ಅವರಿಗೆ ಸಾಕಷ್ಟು ಹಣ ಹಾಗೂ ಬಂಗಾರ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ಮತ್ತು 6 ನೇ ಪ್ರತಿವಾದಿಯರಿಗೂ ಸಹ ದಾವಾ ಆಸ್ತಿಗಳಲ್ಲಿ ಸಮನಾದ ಪಾಲು ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**